ಓ.ಎಸ್. ನಂ.84/2020
ಪಿಡಬ್ಲು-1

ದಿನಾಂಕ 21.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ

ಮನಗೇರಪ್ಪ ಹೊಸಮನಿರವರಿಗೆ 6-ಜನ ಮಕ್ಕಳು ಎಂದರೆ ಸರಿ. ಅವರು ಹೆಸರು ಶರಣಪ್ಪ, ಹಂಪ್ಪವ್ವ, ಲಕ್ಷ್ಮಿಬಾಯಿ, ಗುರುಬಾಯಿ, ಈರಪ್ಪ, ರೇವಣಸಿದ್ದಪ್ಪ ಎಂದರೆ ಸರಿ. ಶರಣಪ್ಪನ ಹೆಂಡತಿ ಹೆಸರು ಗುರುಬಾಯಿ ಎಂದರೆ ಸರಿ. ಸದರಿ ಶರಣಪ್ಪನ ಮಗನ ಹೆಸರು ಬಸವರಾಜ ಎಂದರೆ ಸರಿ. ಬಸವರಾಜನ ಹೆಂಡತಿಯ ಹೆಸರು ನಿಂಗಮ್ಮ ಎಂದರೆ ಸರಿ. ಸದರಿ ಬಸವರಾಜ ಮತ್ತು ನಿಂಗಮ್ಮರವರಿಗೆ 7-ಜನ ಮಕ್ಕಳು ಎಂದರೆ ಸರಿ. ಅವರ ಹೆಸರು ಅಖಂಡಪ್ಪ, ರೇಣುಕಾಬಾಯಿ, ಭಾರತಿ, ಆರತಿ, ಸಿದ್ದಪ್ಪ, ಚಂದ್ರಕಾಂತ, ಮಲ್ಲಿಕಾರ್ಜುನ ಎಂದರೆ ಸರಿ.

ಹಂಪ್ಪವ್ವಳಿಗೆ ನಿಂಗಪ್ಪ ಎನ್ನುವವ ಗಂಡ ಎಂದರೆ ಸರಿ. ಅವರಿಗೆ 03 ಜನ ಮಕ್ಕಳು ಎಂದರೆ ಸರಿ. ಅವರ ಹೆಸರು ಸೋಮರಾಯ, ಬಸವರಾಜ, ಅಪ್ಪಾರಾಯ ಎಂದರೆ ಸರಿ. ಅವರಲ್ಲಿ ಸೋಮರಾಯ ಮತ್ತು ಅಪ್ಪಾರಾಯ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಸೋಮರಾಯನ ಹೆಂಡತಿ ಹೆಸರು ಮಲ್ಲಮ್ಮ ಎಂದರೆ ಸರಿ. ಅಪ್ಪರಾಯನ ಹೆಂಡತಿ ಹೆಸರು ಭೀಮಬಾಯಿ ಎಂದರೆ ಸರಿ. ಸದರಿ ಅಪ್ಪರಾಯನಿಗೆ ಮಲ್ಲಿಕಾರ್ಜುನ, ಚನ್ನಮ್ಮ, ಸುವರ್ಣ, ಗೀತಾ ಎಂಬ ಮಕ್ಕಳಿರುತ್ತಾರೆ.

ಲಕ್ಷ್ಮಿಬಾಯಿ ಗಂಡನ ಹೆಸರು ಈರಪ್ಪ ಎಂದರೆ ಸರಿ. ಅವರಿಗೆ ರೇವಣಸಿದ್ದ, ಭೀಮರಾಯ, ಲಕ್ಷ್ಮಣ ಎಂಬ ಮಕ್ಕಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರೇವಣಸಿದ್ದರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ರೇವಣಸಿದ್ದನ ಹೆಂಡತಿ ಹೆಸರು ಶಿವಬಾಯಿ ಎಂದರೆ ಸರಿ. ರೇವಣಸಿದ್ದನಿಗೆ ಶರಣಮ್ಮ ಮತ್ತು ನಾಗಪ್ಪ ಎಂಬ ಮಕ್ಕಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಭೀಮರಾಯ ಮೃತಪಟ್ಟಿದ್ದು ಆತನ ಹೆಂಡತಿ ಹೆಸರು ಶರಣಮ್ಮ ಎಂದರೆ ಸರಿ.

ಗುರುಬಾಯಿಯ ಗಂಡನ ಹೆಸರು ಹೀರಣ್ಣ ಎಂದರೆ ನನಗೆ ಗೊತ್ತಿಲ್ಲ. ಅವರು ಮೃತಪಟ್ಟಿದ್ದು ಅವರ ಮಕ್ಕಳ ಹೆಸರು ಶಿವಪುತ್ರ ಎಂದರೆ ಸರಿ.

ಈರಪ್ಪರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಆತನ ಹೆಂಡತಿ ಸಂಗಮ್ಮ ಇದ್ದು ಅವರ ಮಕ್ಕಳ ಹೆಸರು ಸಿದ್ದಣ್ಣ, ಸುಭಾಷ, ಶರಣಪ್ಪ, ಜಯಶ್ರೀ ಎಂದರೆ ಸರಿ. ಸಿದ್ದಣ್ಣ ಮೃತಪಟ್ಟಿದ್ದು ಆತನ ಹೆಂಡತಿ ಹೆಸರು ದೇವಕಿ ಎಂದರೆ ಸರಿ. ಸದರಿ ಸಿದ್ದಣ್ಣ ಮತ್ತು ದೇವಕಿಯವರಿಗೆ ರಮೇಶ, ಭಾಗಮ್ಮ ಎಂಬ ಮಕ್ಕಳಿರುತ್ತಾರೆ ಎಂದರೆ ಸರಿ. ಸುಭಾಷ ನನ್ನ ತಂದೆ ಅವರಿಗೆ ನಾನೊಬ್ಬಳೆ ಮಗಳಿರುತ್ತೇನೆ. ಅರುಣಕುಮಾರ ಮತ್ತು ಕಿರಣಕುಮಾರ ನನ್ನ

ಸಹೋದರರು ಎಂದರೆ ಸರಿ. ಶರಣಪ್ಪ ನನ್ನ ದೊಡ್ಡಪ್ಪ ಮತ್ತು ಜಯಶ್ರೀ ನನ್ನ ಅತ್ತೆ ಎಂದರೆ ಸರಿ.

ರೇವಣಸಿದ್ದಪ್ಪನಿಗೆ ನೀಲಮ್ಮ ಮತ್ತು ಚಂದಮ್ಮ ಎಂಬ ಇಬ್ಬರು ಹೆಂಡತಿಯರು ನನಗೆ ಗೊತ್ತಿಲ್ಲ. ಶರಣಮ್ಮ ನಿಲಮ್ಮನ ಮಗಳು ಎಂದರೆ ಸರಿ.

ನಾನು ದಾವೆ ಹಾಕುವಾಗ ಮೇಲೆ ಹೆಳಿದ ಜನರು ಕುಟುಂಬದ ಸದಸ್ಯರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮನಗೇರಾಪ್ಪನರವರ 6 ಮಕ್ಕಳಿಗೆ ಮತ್ತು ಅವರ ವಾರಸುದಾರರಿಗೆ ಈ ದಾವೆ ಹಾಕಲು ನೋಟಿಸು ನೀಡಿರುತ್ತೇನೆ. ಈ ದಾವೆಯಲ್ಲಿ ಪ್ರತಿವಾದಿಯರನ್ನು ಹೊರತುಪಡಿಸಿ ಮನಗೇರಪ್ಪನ ಎಲ್ಲಾ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಮನಗೇರಪ್ಪನ ಮೃತಪಟ್ಟ ನಂತರ ಆತನ ಎಲ್ಲಾ ವಾರಸುದರಾರನ್ನು ಪ್ರತಿವಾದಿಯರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಮನಗೇರಾಪ್ಪನಿಗೆ ಒಟ್ಟು ಎಷ್ಟು ಜಮೀನುಗಳಿದ್ದವು ಎಂದು ನನಗೆ ಗೊತ್ತಿಲ್ಲ. ಮನಗೇರಪ್ಪನ ಮಕ್ಕಳ ನಡುವೆ ಪಾಲು ಆಗಿದೆಯೊ ಇಲ್ಲೆವೊ ಎಂದು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯರು ಪ್ರತಿವಾದ ಪತ್ರದಲ್ಲಿ ಏನು ಜವಾಬು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮನಗೇರಪ್ಪನ ಮಕ್ಕಳ ನಡುವೆ ಪಾಲು ಆದ ಬಗ್ಗೆ ಮತ್ತು ಯಾರಿಗೆ ಎಷ್ಟು ಪಾಲು ಬಂದಿದೆ ಎಂದು ನನ್ನ ದಾವೆಯಲ್ಲೆ ಬರೆಸಿಲ್ಲ ಎಂದರೆ ಸರಿ. ದಾವಾಸ್ತಿಗಳು ಯಾವ ರೀತಿ ಬಂದಿರುತ್ತವೆ ಎಂದರೆ ಸಾಕ್ಷಿ ಪಾಲು ಆಗಿಲ್ಲ ಎಂದು ಹೇಳುತ್ತಾರೆ. ಯಾವ ಆಸ್ತಿಗಳು ಯಾವ ಮೂಲಗಳಿಂದ ಬಂದಿರುತ್ತವೆ ಎಂದರೆ ಸಾಕ್ಷಿ ನನ್ನ ತಾತನಿಂದ ಬಂದಿರುತ್ತವೆ. ಈ ಕುರಿತು ನಾನು ಕಾಗದ ಪತ್ರಗಳನ್ನು ನೋಡಿರುತ್ತೇನೆ. ಸರ್ವೆ ನಂ.56 ಮೊದಲು ಯಾರ ಹೆಸರಿನಲ್ಲಿತ್ತು ಎಂದು ನಾನು ಪಹಣಿಯನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ಅಜ್ಜನ ಹೆಸರು ಇತ್ತು. ಪಹಣಿಗಳನ್ನು ದಾವೆ ಹಾಕುವ ಸಮಯದಲ್ಲಿ ನೋಡಿರುತ್ತೇನೆ. ಸರ್ವೆ ನಂ.56 ರಲ್ಲಿ ನನ್ನ ಅಜ್ಜನ ಹೆಸರು ಯಾವತ್ತೂ ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ಹೇಳುತ್ತಾರೆ. ಸರ್ವೆ ನಂ.56 ಸಿದ್ದಣ್ಣ ತಂದೆ ಭೀಮರಾಯರವರ ಮತ್ತು ಹೀರಣ್ಣರವರ ಹೆಸರಿನಲ್ಲಿತ್ತು ಎಂದರೆ ಸರಿ. ಸರ್ವೆ ನಂ.56 ನ್ನು 1ನೆ ಪ್ರತಿವಾದಿ ತನ್ನ ಸ್ವಂತ ಆದಾಯದಿಂದ ನೊಂದಾಯಿತ ಖರೀದಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಸಂಗಮ್ಮಳ ತವರು ಮನೆ ಹರವಾಳ ಎಂದರೆ ಸರಿ. ಅವರ ತವರುಮನೆಯವರಿಗೆ ಬಹಳಷ್ಟು ಆಸ್ತಿ ಇತ್ತು ಎಂದರೆ ಸರಿ. ಸಂಗಮ್ಮಳು ಸದರಿ ಜಮೀನು ಖರೀದಿ ಮಾಡಲು ಅವರ ತವರು ಮನೆಯವರು ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಂಗಮ್ಮಳು ಸರ್ವೆ ನಂ.56 ನ್ನು 2005-06 ನೆ ಸಾಲಿನಲ್ಲಿ ಖರೀದಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ಸಂಗಮ್ಮಳ ಹೆಸರಿನಲ್ಲಿ ಪಹಣಿ ಇರುತ್ತದೆ ಎಂದರೆ ಸರಿಯಲ್ಲ.

ಸದರಿ ಸಂಗಮ್ಮಳು ಸರ್ವೆ ನಂ.56 ನ್ನು 2ನೆ ಪ್ರತಿವಾದಿ ನೊಂದಾಯಿತ ದಾನ ಪತ್ರ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಅದರಂತೆ ಆತನ ಹೆಸರು ಪಹಣಿಯಲ್ಲಿ ಬಂದಿದ್ದು ಆತನೆ

ಸ್ವಂತತ್ರ ಮಾಲಿಕ ಎಂದರೆ ಸರಿಯಲ್ಲ. ಸರ್ವೆ ನಂ.56 ರಲ್ಲಿ ನನಗಾಲಿ ಉಳಿದ ಪ್ರತಿವಾದಿಯರಿಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ.156 ರಲ್ಲಿ 03-ಎಕರೆ ಕೆನಾಲ ಹಾದು ಹೋಗಿರುತ್ತದೆ ಎಂದರೆ ಸರಿ. ಸರ್ವೆ ನಂ.156 ರಲ್ಲಿ 8-ಎಕರೆ ಜಮೀನನ್ನು 1993 ರಲ್ಲಿ ಸೋಮರಾಯ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದಂತೆ ಆತನ ಹೆಸರಿಗೆ ಪಹಣಿಯಿದ್ದು ಅವನೆ ಕಬ್ಜೆಯಲ್ಲಿರುತ್ತಾನೆ ಎಂದರೆ ಸರಿ. ಸರ್ವೆ ನಂ.156 ನ್ನು 1993 ರಲ್ಲಿ ಕುಟುಂಬದ ಅಡಚಣೆಗಾಗಿ ಎಲ್ಲಾ ಕುಟುಂಬದ ಸದಸ್ಯರ ಒಪ್ಪಿಗೆ ಮೇರೆಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತವಾಗಿ ಸರ್ವೆ ನಂ.156 ರಲ್ಲಿ ಕೇವಲ 06-ಎಕರೆ 10-ಗುಂಟೆ ಉಳಿದಿದ್ದು ಅದು 8ನೆ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

ಸರ್ವೆ ನಂ.23 ಹೀರಪ್ಪರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಹೀರಪ್ಪನಿಗಿಂತ ಮೊದಲು ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಹೀರಪ್ಪನು 1ನೆ ಪ್ರತಿವಾದಿಯ ಜೀವನಾಂಶಕ್ಕಾಗಿ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಈ ಕಾರಣ ನನಗೆ ಸದರಿ ಆಸ್ತಿಯಲ್ಲಿ ನನಗೆ ಹಕ್ಕಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ.156 ರಲ್ಲಿ ಕೇವಲ 06-ಎಕರೆ 10-ಗುಂಟೆ ಜಮೀನನ್ನು ಹೊರತುಪಡಿಸಿ ನನಗೆ ಬೇರೆ ಯಾವುದೆ ಆಸ್ತಿಗಳಲ್ಲಿ ನನಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಎಲ್ಲಾ ದಾವಾಸ್ತಿಗಳನ್ನು ಮತ್ತು ಆತನ ಎಲ್ಲಾ ವಾರಸುದಾರರನ್ನು ಸರ್ಪಡೆ ಮಾಡದ ಕಾರಣ ಈ ದಾವೆ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ